ಇವನು ನೋಡುತ್ತಿದ್ದಂತೆ, ಇವರನ್ನು ದಾಟಿ ಕೆಲವರು ಓಡಿದರು.

ಶಂಭೂ ಈಗ ಸಮತಟ್ಟಲ್ಲದ ಜಾಗದಲ್ಲಿ ಓಡುತ್ತಿದ್ದ. ಇಳಿಜಾರಿನಲ್ಲಿ ಜೋಪಾನವಾಗಿ ಇಳಿಯಬೇಕು ಎಂದುಕೊಂಡ ಅವನು. ಕ್ಷೀಣವಾದ ಬೆಳಕಿನ ಆಸರೆಯಲ್ಲಿ ಕಣ್ಣಲ್ಲಿ ಕಣ್ಣಿಟ್ಟು, ಏದುಸಿರು ಬಿಡುತ್ತಾ ಶಕ್ತಿ ಬಿಟ್ಟು ಓಡುತ್ತಿದ್ದ. ಹಣೆಯ ಮೇಲಿನ ಹುಬ್ಬಿನ ಬಳಿ ರಕ್ತದ ಒತ್ತಡದಿಂದ ಧಮನಿ ಉಬ್ಬಿನಿಂತಿತ್ತು.

ಕಾಳ್ಗಿಚ್ಚಿನ ಶಾಖದ ಅಲೆ ತನ್ನ ಬೆನ್ನ ಹಿಂದೆ ಹೊಡೆಯುತ್ತಿರುವಂತೆ ಶಂಭುವಿಗೆ ಭಾಸವಾಯಿತು. ಹಿಂತಿರುಗಿ ನೋಡಲು, ಕೂಡ ಅವನಿಗೆ ಭಯವಾಗುತ್ತಿತ್ತು. ಇವನನ್ನು ದಾಟಿ ಹೋಗುತ್ತಿದ್ದ ಒಬ್ಬಿಬ್ಬರ ಸಂಖ್ಯೆ ಈಗ ಅನೇಕವಾಗತೊಡಗಿತು. ಇವನನ್ನು ಸವರಿಕೊಂಡು ಅನೇಕರು ಓಡತೊಡಗಿದರು.

ಇಕ್ಕಟ್ಟಾದ ಕಣಿವೆಯ ಜಾಗದಲ್ಲಿ ಶಂಭು ಓಡುತ್ತಿದ್ದ. ಅವನ ಹಿಂದೆ ದಟ್ಟವಾದ ಜನ ಪ್ರವಾಹ ಅವನನ್ನು ದಬ್ಬಿಗೊಂಡು ಓಡಿಬರುತ್ತಿತ್ತು. ಶಂಭುವಿನ ಓಟದ ವೇಗ ತೀರಾ ಕುಗ್ಗಿತ್ತು. ಅವನನ್ನು ಸವರಿಕೊಂಡು ಹೋಗುತ್ತಿದ್ದವರು ಈಗ ಅವನಿಗೆ ಡಿಕ್ಕಿ ಹೊಡೆದು ಓಡತೊಡಗಿದರು.

ತನ್ನಿಬ್ಬರು ಮಕ್ಕಳನ್ನು ಭದ್ರವಾಗಿ ಹಿಡಿದುಕೊಂಡು ಅಡ್ಡಗಾಲು ಹಾಕುತ್ತಾ ಶಂಭು ಗಾಭರಿಯಿಂದ ಏದುಸಿರುಬಿಡುತ್ತಾ ಓಡುತ್ತಿದ್ದ.

ಈಗಂತೂ ಜನಪ್ರವಾಹ ಎತ್ತರಿಸಿ ಬಂದಿತು. ನಡಿಗೆಯ ಮೇಲೆ ಅವನಿಗೆ ಹತೋಟಿ ತಪ್ಪಿತು.

ತಾನು ಬೀಳುವುದರಿಂದ ತಪ್ಪಿಸಿಕೊಳ್ಳಲು, 'ಹುಷಾರು, ಹುಷಾರು' ಎಂದು ಕಿರುಚುತ್ತಿದ್ದ. ಆದರೆ ಈ ಗದ್ದಲದಲ್ಲಿ ಜನಗಳ ಆಕ್ರಂದನದಲ್ಲಿ ಅವನ ಕೂಗು ಎಲ್ಲೋ ಮರೆಯಾಗಿತ್ತು.

**ತಾನು ಮಕ್ಕಳನ್ನು ಕರೆದುಕೊಂಡು ಬಂದಿದ್ದೇಕೆ – ಅವುಗಳ ಏಳಿಗೆಗೆ ಸ್ವಾಮಿಯ ಬಳಿ ಪ್ರಾರ್ಥಿಸಲು; ಆದರೆ ಆದದ್ದೇನು! ಸ್ವಾಮಿಗೆ ನನ್ನ ಮೊರೆ ಕೇಳಿಸಲಿಲ್ಲವೇ? ಅಥವಾ... ಬೇಕೆಂದೆ ಅವನು ನನ್ನ ಮಕ್ಕಳನ್ನು ಹೀಗೆ ಕೊಂದನೆ? ಅವನು ಕರುಣಾಮಯಿಯಲ್ಲವೇ?... ಎಷ್ಟು ಮಕ್ಕಳ ಜೀವಗಳು ನಾಮಾವಶೇಷವಾದವು?!...**

ಒಂದು ಕ್ಷಣ.

ಮರುಕ್ಷಣದಲ್ಲಿ ಹಿಂದಿನಿಂದ ಬಂದ ಕೆಲವರು ಅವನನ್ನು ತಳ್ಳಿ ಮುನ್ನುಗ್ಗಿದಾಗ, ಅವನು ನೆಲಕ್ಕೆಬಿದ್ದ. ಅವನನ್ನ ದಬ್ಬಿ ಕೆಳಕ್ಕೆ ನೂಕಿ ಹತ್ತಾರು ಜನ ಅವನ ದೇಹದ ಮೇಲೆ ಕಾಲಿಡುತ್ತಾ ಓಡಿದರು. ಶಂಭುವಿನ ಕೈಯಲ್ಲಿದ್ದ ಇಬ್ಬರು ಹುಡುಗರು ಅಷ್ಟು ದೂರ ಎಸೆಯಲ್ಪಟ್ಟಿದ್ದರು. ಭಯ ಚಕಿತ ನೇತ್ರಗಳಿಂದ ಕೆಳಗೆ ಬಿದ್ದ ಹುಡುಗರ ಕಡೆ ನೋಡುತ್ತಾ 'ಕಂದ' ಎಂದು ಕೂಗುತ್ತಾ ಮೇಲೆ ಏಳಲು ಪ್ರಯತ್ನಿಸಿದ.

ಅವನು ಮೇಲೇಳಲೂ ಬಿಡದಂತೆ, ಅವನ ಬೆನ್ನ ಮೇಲೆ, ಕೈಮೇಲೆ ತಮ್ಮ ಪಾದಗಳನ್ನಿಟ್ಟು ಜನ ಓದುತ್ತಿದ್ದರು. ತನ್ನ ಶಕ್ತಿಯನ್ನೆಲ್ಲ ಬಿಟ್ಟು ಶಂಭು, ಕೊಸರಿಕೊಂಡು ಮೇಲೆದ್ದ.

ಅಷ್ಟರಲ್ಲಿ ಮತ್ತಷ್ಟು ಜನ ತಾವು ಎಲ್ಲಿ ಓಡುತ್ತಿದ್ದೇವೆ ಎಂಬ ಪರಿವೆಯಿಲ್ಲದೆ, ಕೆಳಗೆ ಬಿದ್ದಿದ್ದ